

ಭಾರತಿ ದೇವಿ ಪಿ.

# ಬೆರಗು ಧ್ಯಾನವಾಗುವ ಪರಿ...

ಕವಿದ ಹೆಬ್ಬಿರುಳಿನ ನಡುವೆ ವಿಭಿನ್ನ ದಾರಿಗಳಲ್ಲಿ ನಾವೆಲ್ಲ ತಡಕಾಡುತ್ತಾ ನಿಂತಿದ್ದೇವೆ. ಹೊಸ ದಾರಿ, ಬಿಡುಗಡೆ, ಪಲ್ಲಟ, ರೂಪಾಂತರಗಳು ಬೆರಗು ಹುಟ್ಟಿಸುತ್ತಲೇ ನಮ್ಮನ್ನು ಸೆಳೆಯುತ್ತಿವೆ. ಇವುಗಳ ಬೆನ್ನು ಹತ್ತಿ ನಾವು ಓಡುತ್ತಲೇ ಇದ್ದೇವೆ. ಈ ಓಟದ ಮಧ್ಯೆ ನಮ್ಮ ಹೆಜ್ಜೆಗಳು ಎಲ್ಲಿವೆ? ನಮ್ಮ ಗಮ್ಯ ಯಾವುದು? ಎಂದು ಒಂದು ಕ್ಷಣ ನಿಂತು ಯೋಚಿಸುತ್ತಾ ಸಾಗಬೇಕಾಗಿದೆ. ಹೀಗೆ ನಮ್ಮನ್ನು ಚಿಂತನೆಗೆ ಹಚ್ಚುವ, ಆಳಕ್ಕೆ ಎಳೆದುಕೊಳ್ಳುವ, ಬೆರಗಿನ ಕ್ಷಣಗಳನ್ನು ಧ್ಯಾನಸ್ಥ ನೆಲೆಗೆ ಒಯ್ಯುವ ಕವಿತೆಗಳನ್ನು ಎಸ್. ಮಂಜುನಾಥ್ ತಮ್ಮ 'ಹೆಬ್ಬಿರುಳಿನ ನಿಬ್ಬೆರಗು' ಸಂಕಲನದ ಮೂಲಕ ನಮ್ಮ ಮುಂದಿಟ್ಟಿದ್ದಾರೆ.

ಇಲ್ಲಿನ ಕವಿತೆಗಳು ಕಾಲಜ್ಞಾನಿಯ ನುಡಿಗಳಂತೆ ನಮ್ಮ ಮನಃಪಟಲವನ್ನು ಆವರಿಸಿಕೊಳ್ಳುತ್ತವೆ. ಇಲ್ಲಿ ನಾನು ಕಾಲಜ್ಞಾನಿ ಎಂಬ ಪದವನ್ನು ಭವಿಷ್ಯ ನುಡಿಯುವವರು ಎಂಬ ಸರಳ ಅರ್ಥದಲ್ಲಿ ಬಳಸುತ್ತಿಲ್ಲ. ಅದನ್ನು ಹಿಂದು ಮತ್ತು ಮುಂದಿನದನ್ನು ವರ್ತಮಾನದ ಬಿಂದುವಿನೊಂದಿಗೆ ಜೋಡಿಸುವ ವಿಸ್ತಾರವಾದ ನೋಟ ಎಂಬರ್ಥದಲ್ಲಿ ನೋಡುತ್ತಿದ್ದೇನೆ. ಅಪಾರ ಜೀವಸಮೃದ್ಧಿಯ ಚೈತನ್ಯದಿಂದ ಕೂಡಿದ, ಆದರೆ ಅಷ್ಟೇ ತಾರತಮ್ಯ, ವಿಷಮತೆಗಳಿಂದ ಕೂಡಿದ 'ಗತ' ನಮ್ಮ ಹಿಂದೆ ಇದೆ. ಈ ಅರಿವಿನೊಂದಿಗೇ ವರ್ತಮಾನದಲ್ಲಿ ಹೆಜ್ಜೆಗಳನ್ನು ಇಡುತ್ತಿರುವ ಹೊತ್ತಿನಲ್ಲಿ ಎಸ್. ಮಂಜುನಾಥ್ ನಮ್ಮನ್ನು ವೈಯಕ್ತಿಕ ನೆಲೆಯಲ್ಲಿ ಮತ್ತು ಸಾಮುದಾಯಿಕ ನೆಲೆಯಲ್ಲಿ ಅವಲೋಕನಕ್ಕೆ ಹಚ್ಚುತ್ತಾರೆ. ಈ ದಿಸೆಯಲ್ಲಿ ನಮ್ಮ ಸಾಮಾಜಿಕ ನೆಲೆಗಟ್ಟುಗಳ ಅರಿವಿನೊಂದಿಗೆ ಸಾಗಬೇಕಾಗುತ್ತದೆ.

ಅಕ್ಷರವಂಚಿತ ಸಮುದಾಯಗಳು ಶಿಕ್ಷಣದ ಮೂಲಕ ದನಿ ಪಡೆದುಕೊಂಡು ಸಂಘಟಿತವಾಗಿ ಹಕ್ಕುಗಳಿಗೆ ಹೋರಾಟ ಮಾಡಲು ತೊಡಗಿ ದಶಕಗಳೇ ಕಳೆದವು. ಈ ಹಂತದಲ್ಲಿ ಆ ಸಮುದಾಯಗಳು ಎದುರಿಸುತ್ತಿರುವ ಸಂಗತಿಗಳೇನು? ಸಾಮಾಜಿಕವಾಗಿ ಆದ ಚಲನೆ ಎಂತಹುದು? ಶೋಷಕ ಸಮುದಾಯಗಳ ನೋಟಗಳು ಬದಲಾಗಿವೆಯೇ? ನಮ್ಮೊಳಗಿನ ಒಡಕುಗಳನ್ನು ನಾವು ಹೇಗೆ ಬೆಸೆಯಬಲ್ಲೆವು? ಇವೆಲ್ಲವೂ ಈ ಕಾಲದ ಮುಖ್ಯ ಪ್ರಶ್ನೆಗಳಾಗಿವೆ. ಇವುಗಳೊಂದಿಗೆ ಬರೆಯುತ್ತಿರುವ ಎಸ್. ಮಂಜುನಾಥ್, ಹಿರಿಯ ಮತ್ತು ಸಮಕಾಲೀನ ಕವಿಗಳ ಜೊತೆ ಸಂವಾದಿಸುತ್ತಲೇ ತಮ್ಮದೇ ಆದ ಹೊಸ ಭಾಷೆ, ನುಡಿಗಟ್ಟುಗಳೊಂದಿಗೆ ನಮ್ಮೊಂದಿಗೆ ಸಂವಹನ ನಡೆಸುತ್ತಿದ್ದಾರೆ.

ಈ ಸಂಕಲನದ ಕವಿತೆಗಳು ಅವವೇ ಪದಗಳಿಗೆ, ರೂಪಕಗಳಿಗೆ ಹೊಸ ಅರ್ಥಶಕ್ತಿ ನೀಡುವ ಮೂಲಕ ಓದುಗರನ್ನು ಗಾಢವಾಗಿ ಸೆಳೆದುಬಿಡುತ್ತವೆ. ಓದಿನ

